

بسم اللهِ الرّحمٰن الرّحيم

# ಯು.ಕೆ. ಜಲ್ಸ ಸಾಲಾನ – 2021

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06–08–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ಜಲ್ಸ ಸಾಲಾನ ಬ್ರಿಟನ್ ಶುರುವಾಗುತ್ತಿದೆ – ಇನ್‌ಶಾ ಅಲ್ಲಾಹ್. ಮೊತ್ತಮೊದಲಾಗಿ ನಾನು ಹೇಳಬಯಸುವುದೇನೆಂದರೆ, ಜಲ್ಸ ಅನುಗ್ರಹಪೂರ್ಣವಾಗಿ ಜರುಗಲು ಬಹಳ ದುಆ ಮಾಡಿರಿ. ಭಾಗವಹಿಸುವವರು ಒಳಿತು ಮತ್ತು ದೇವಭಕ್ತಿಯಲ್ಲಿ ಹೆಚ್ಚು ಮುಂದಾಗಿರಿ. ಮಹಾಮಾರಿಯ ಕಾರಣದಿಂದ ಭಾಗವಹಿಸುವವರ ಸಂಖ್ಯೆ ಬಹಳ ಪರಿಮಿತವಾಗಿದೆ. ಆದರೆ ಮನೆಗಳಲ್ಲಿ ಮತ್ತು ಜಮಾಅತಿನ ವ್ಯವಸ್ಥೆಯಡಿಯಲ್ಲಿ ಜಲ್ಸ ಆಲಿಸಲಾಗುವುದು ಎಂದು ನಾನು ಕೇಳಿದ್ದೇನೆ. ಹೇಗಿದ್ದರೂ ಜಲ್ಸದಲ್ಲಿ ಪಾಲ್ಗೊಳ್ಳುವವರೆಲ್ಲ ಜಲ್ಸ ಮೈದಾನದಲ್ಲಿ ಇದ್ದೇವೆ ಎಂಬ ಯೋಚನೆಯೊಂದಿಗೆ ಪಾಲ್ಗೊಳ್ಳಿರಿ ಮತ್ತು ಆ ಸಮಯವನ್ನು ದುಆಗಳಲ್ಲಿ ಕಳೆಯಿರಿ.

ಈ ವರ್ಷ ಜಲ್ಸದ ವ್ಯವಸ್ಥಾಪಕರಿಗೆ ಮತ್ತು ಭಾಗವಹಿಸುವವರಿಗೆ ಸ್ಥಿತಿಗತಿಗಳು ಸಹ ಬೇರೆಯಾಗಿ ಅನುಭವವಾಗುವುದು. ಕೆಲವು ಸೌಲಭ್ಯಗಳು ಲಭ್ಯವಾಗಿರುವುದಿಲ್ಲ. ಆದ್ದರಿಂದ ಭಾಗವಹಿಸುವವರು ಈ ಅವಸ್ಥೆಗಳನ್ನು ಮುಂದಿರಿಸಿ ಅವುಗಳನ್ನು ಕಡೆಗಣಿಸಬೇಕು. (ಈ ಸಂಬಂಧವಾಗಿಯೂ ದುಆದ ಕಡೆಗೆ ಹುಝೂರ್ ವಿಶೇಷವಾಗಿ ಗಮನಸೆಳೆದರು. ಜಲ್ಸ ಮತ್ತು ಅತಿಥಿಸತ್ಕಾರಕ್ಕೆ ಸಂಬಂಧಿಸಿ ಹೀಗೆ ಹೇಳಿದರು:) ಜಲ್ಸದ ಒಂದು ದಿನ ಮುಂಚೆ ನಾನು ಸಾಮಾನ್ಯವಾಗಿ ಅತಿಥಿಗಳಿಗೆ ಮತ್ತು ಡ್ಯೂಟಿ ನೀಡುವವರಿಗೆ ಅವರ ಕರ್ತವ್ಯಗಳ ಕುರಿತು ಹೇಳಿಕೊಡುತ್ತೇನೆ. ಈ ವರ್ಷ ಅದು ಸಾಧ್ಯವಾಗಲಿಲ್ಲ. ಆದ್ದರಿಂದ ಇಂದು ಸ್ವಲ್ಪ ಹೇಳುತ್ತೇನೆ.

ಅತಿಥಿ ಸತ್ಕಾರದ ಕುರಿತು ಯಾವುದೇ ದೂರು ಇರಬಾರದು. ಯಾವುದೇ ದೂರು ಉಂಟಾಗದಂತೆ ವ್ಯವಸ್ಥಾಪಕರು ಪ್ರಯತ್ನಿಸಬೇಕು. ಪ್ರತಿಯೊಂದು ವಿಭಾಗದ ಸೇವಕರು ತಮ್ಮ ಡ್ಯೂಟಿಗಳಲ್ಲಿ ಮತ್ತು ತಮ್ಮ ಕೆಲಸಗಳಲ್ಲಿ ನುರಿತವರಾಗಿದ್ದಾರೆ ಮತ್ತು ಬಹಳ ಉತ್ತಮವಾಗಿ ಕೆಲಸವನ್ನು ನೆರವೇರಿಸುವ ಸಾಮರ್ಥ್ಯವನ್ನು ಹೊಂದಿರುವರು. ಹೊಸದಾಗಿ ಡ್ಯೂಟಿಗೆ ಸೇರುವವರಿಗೆ ಅವರು ಕಲಿಸಿಕೊಡಲೂ ಬಲ್ಲರು. ಆದ್ದರಿಂದ ಕೆಲಸದ ಬಗ್ಗೆ ಗೊತ್ತಿಲ್ಲ ಎಂಬ ಚಿಂತೆಯಿಲ್ಲ. ಆದರೆ ಸತ್ಯವಿಶ್ವಾಸಿಗಳಿಗೆ ನೆನಪಿಸಿಕೊಡಬೇಕು ಅದು ಅವರಿಗೆ ಪ್ರಯೋಜನಕಾರಿಯಾಗಿದೆ ಎಂಬುದು ಅಲ್ಲಾಹನ ಆಜ್ಞೆಯಾಗಿರುವುದರಿಂದ ನಾನು ಹೇಳುತ್ತಿದ್ದೇನೆ. ಅದಲ್ಲದೇ ನಾನು ಹೇಳಿದಂತೆ ಈ ವರ್ಷದ ಜಲ್ಸದ ಏರ್ಪಾಡು ಪರಿಮಿತವಾದುದಾಗಿದೆ. ಆದ್ದರಿಂದ ಕೆಲವು ವಿಷಯಗಳಲ್ಲಿ ಅಸಡ್ಡೆಯ ಕಾರಣದಿಂದ ಕೊರತೆಯಿರಬಹುದು. ಕೆಟ್ಟ ಹವಾಮಾನದ ಕಾರಣದಿಂದ ಕೆಲವು ವಿಭಾಗಗಳಲ್ಲಿ ವಿಶೇಷವಾದ ಗಮನದ ಆವಶ್ಯಕತೆಯಿದೆ. ಅತಿಥಿಗಳು ಹೆಚ್ಚಿರಲಿ ಅಥವಾ ಕಡಿಮೆಯಿರಲಿ, ಜಲ್ಸದಲ್ಲಿ ಬರುವ ಅತಿಥಿಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಾಗಿದ್ದಾರೆ. ನಾವು ಅವರ ಅತಿಥಿ ಸತ್ಕಾರ ಮಾಡಬೇಕು.

ಅತಿಥಿ ಸತ್ಕಾರವೆಂಬ ನೈತಿಕ ಗುಣ ಪ್ರವಾದಿಗಳ ಒಂದು ವಿಶೇಷವಾದ ಸ್ವಭಾವವಾಗಿದೆ. ಆದ್ದರಿಂದ ಒಂದು ಧಾರ್ಮಿಕ ಜಮಾಅತ್ ಎಂಬ ನೆಲೆಯಲ್ಲಿ ನಮ್ಮೊಳಗೆ ಈ ಸ್ವಭಾವಗುಣ ಕಡ್ಡಾಯವಾಗಿ ಪ್ರಕಟವಾಗಿರಬೇಕು. ಹಝ್ರತ್ ಪೈಗಂಬರ್(ಸ)ರ ಕಾಲಘಟ್ಟದಲ್ಲೂ ಅತಿಥಿಗಳು ಹೆಚ್ಚು ಬರಲು ಶುರುವಾದಾಗ, ಹಝ್ರತ್ ಪೈಗಂಬರ್(ಸ) ಅತಿಥಿಗಳನ್ನು ಸಹಾಬರಿಗೆ ಹಂಚಿಕೊಡುತ್ತಿದ್ದರು. ಸಹಾಬರು ಸಹ ಸಂತೋಷದಿಂದ ಅತಿಥಿಗಳನ್ನು ಜೊತೆಗೆ ಕೊಂಡುಹೋಗುತ್ತಿದ್ದರು. ಬೆಳಿಗ್ಗೆ ಅತಿಥಿಗಳೊಡನೆ, ಅವರಿಗೆ ಲಭಿಸಿದ ಸೇವೆಯ ಬಗ್ಗೆ ಕೇಳಲಾಗುವಾಗ ಪ್ರತಿಯೊಬ್ಬ ಅತಿಥಿಯ ಉತ್ತರ ಹೀಗೆಯೇ ಇರುತ್ತದೆ: ಅತಿಥಿ ಸತ್ಕಾರದ ಹಕ್ಕನ್ನು ಈಡೇರಿಸುವ ಇಂತಹ ಸತ್ಕಾರ ಮಾಡುವವರನ್ನು ನಾವು ಮುಂಚೆ ಕಂಡಿಲ್ಲ. ಆದ್ದರಿಂದ ನಮ್ಮ ಮುಂದೆ ಈ ಮಾದರಿಯಿದೆ. ಈ ಕಾಲದಲ್ಲಿ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ್ದೇವೆ. ಅವರು ಸಹ ನಮಗೆ ಈ ಕುರಿತು ಉಪದೇಶ ನೀಡಿರುವರು.

(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಉಲ್ಲೇಖದ ಕುರಿತು ಪ್ರಸ್ತಾಪಿಸುತ್ತಾ ಹುಝೂರ್ ಹೇಳಿದರು:) ಅತಿಥಿಯು ಕಠಿಣವಾದ ಪದಗಳನ್ನು ಹೇಳಿದರೂ ಕೂಡ ಬೇಸರಗೊಳ್ಳಬಾರದು. ಅತಿಥಿಯು ಅಹ್ಮದಿಯಾಗಿದ್ದರು ಕೂಡ ಕಠಿಣ ವರ್ತನೆಯ ಬದಲಾಗಿ ಕಠಿಣವಾಗಿ ವರ್ತಿಸಬೇಡಿರಿ. ನಮ್ಮವರಾಗಿರಲಿ ಅನ್ಯರಾಗಿರಲಿ, ಅವರೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತೋರಿಸಿದ ಅಸಾಮಾನ್ಯವಾದ ಮಾದರಿಯನ್ನು ನಾವು ಕಾಣುತ್ತೇವೆ. ಏಕೆಂದರೆ ಇಸ್ಲಾಮಿನ ಸುಂದರವಾದ ಚಿತ್ರ ನಮ್ಮ ಮುಂದೆ ಬರಲು ಮತ್ತು ನಾವು ಲೋಕದ ಮುಂದೆ ಇರಿಸಲಿಕ್ಕಾಗಿ ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೇ ಈ ಉನ್ನತ ನೈತಿಕಗುಣಗಳನ್ನು ಸ್ಥಾಪಿಸಬೇಕಾಗಿತ್ತು.

ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬ್(ರ)ರೊಂದಿಗೆ ಹಝ್ರತ್ ಮಸೀಹ್ ಮೌಊದ್(ಅ)ರ

ಅತಿಥಿ ಸತ್ಕಾರದ ಒಂದು ಘಟನೆಯಿದೆ. ಆ ಘಟನೆಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಸ್ವತಃ ತನ್ನ ಕೈಯಿಂದ ಒಂದು ಟ್ರೇಯಲ್ಲಿ ಮುಫ್ತಿ ಸಾಹಿಬ್‌ರಿಗೆ ಊಟವನ್ನು ತಂದರು. ಇದರಿಂದ ಹಝ್ರತ್ ಮುಫ್ತಿ ಸಾಹಿಬ್‌ರ ಕಣ್ಣುಗಳು ಅನಿಯಂತ್ರಿತವಾಗಿ ತೇವಗೊಂಡವು. ಹಝ್ರತ್ ಮಸೀಹ್ ಮೌಊದ್(ಅ) ನಮ್ಮ ಮಾರ್ಗದರ್ಶಿ ಮತ್ತು ನೇತಾರರಾಗಿಯೂ ನಮ್ಮ ಇಷ್ಟೆಲ್ಲ ಸೇವೆ ಮಾಡುವಾಗ ನಾವು ಅಹ್ಮದಿಯರು ಪರಸ್ಪರ ಎಷ್ಟು ಪ್ರೀತಿಯಿಂದ ವರ್ತಿಸಬೇಕು.

ಒಂದು ಬಾರಿ ಹಾಸಿಗೆಗಳ ಕೊರತೆಯುಂಟಾಯಿತು. ಆಗ ಹಝ್ರತ್ ಮಸೀಹ್ ಮೌಊದ್(ಅ) ಮನೆಯ ಎಲ್ಲ ಹಾಸಿಗೆಗಳನ್ನು ಅತಿಥಿಗಳಿಗೆ ಕೊಟ್ಟರು. ಆದರೆ ಯಾರಿಗೂ ಅದು ಗೊತ್ತಾಗದಂತೆ ನೋಡಿದರು. ಕೆಲವೊಮ್ಮೆ ಕೆಲವರು ತ್ಯಾಗಗಳನ್ನು ಮಾಡುತ್ತಾರೆ ಆದರೆ ಅದರ ಕುರಿತು ಹಂಗಿಸಿಕೊಳ್ಳುತ್ತಾರೆ. ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಂದರ್ಭದಲ್ಲಿ ಹೇಳಿದರು: ಅತಿಥಿಗಳಿಗೆ ಯಾವುದೇ ತೊಂದರೆಯಾಗಬಾರದು ಎಂಬ ಚಿಂತೆ ನನಗೆ ಇರುತ್ತದೆ. ಅತಿಥಿಯ ಹೃದಯ ಕನ್ನಡಿಯಂತೆ ಆಗಿರುತ್ತದೆ. ಸ್ವಲ್ಪ ಅಡ್ಡಿಯಾದರೂ ಒಡೆದು ಹೋಗುವುದು.

ಆರಂಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅತಿಥಿಗಳೊಂದಿಗೆ ಕುಳಿತುಕೊಂಡು ಊಟ ಮಾಡುತ್ತಿದ್ದರು. ಆದರೆ ನಂತರ ಊಟದಲ್ಲಿ ಪಥ್ಯ ಮತ್ತು ಅತಿಥಿಗಳ ಸಂಖ್ಯೆ ವರ್ಧನೆಗೊಂಡ ಕಾರಣದಿಂದ ಈ ರೂಢಿಯನ್ನು ಜಾರಿಯಲ್ಲಿರಿಸಲು ಸಾಧ್ಯವಾಗಲಿಲ್ಲ. ಒಂದು ಬಾರಿ ಲಂಗರ್‌ಖಾನದ ಮುಖ್ಯಸ್ಥರನ್ನು ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಉಪದೇಶಿಸಿದರು: ಎಲ್ಲರನ್ನು ಆದರಣೀಯರೆಂದು ಅರಿತುಕೊಂಡು ಅವರ ಸೇವೆ ಮಾಡಬೇಕು. (ಹುಝೂರ್ ಹೇಳಿದರು:) ಎಲ್ಲರನ್ನು ಅತಿಥಿಗಳೆಂದು ಅರಿತುಕೊಂಡು ಸಮಾನವಾಗಿ ಸೇವೆ ಮಾಡಬೇಕು. ಪ್ರತಿಯೊಬ್ಬರೊಂದಿಗೆ ಗೌರವ ಮತ್ತು ಆದರಭಾವದಿಂದ ವರ್ತಿಸಬೇಕು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ನಿಮ್ಮ ಬಗ್ಗೆ ನನಗೆ ಸದ್ಭಾವನೆಯಿದೆ. ಆದ್ದರಿಂದ ಅತಿಥಿಗಳನ್ನು ಬಹಳ ಉತ್ತಮವಾಗಿ ಸೇವೆ ಮಾಡಿರಿ. (ಹುಝೂರ್ ಹೇಳಿದರು:) ಇದೇ ಸದ್ಭಾವನೆ ಈಗಲೂ ಇದೆ.

ಕೆಲವು ವಿಭಾಗಗಳ ಸೇವಕರಿಗೆ ಕೆಲವು ಕಷ್ಟತೆಗಳನ್ನು ಎದುರಿಸಬೇಕಾಗಿ ಬರುವುದು ಎಂದು ನನಗೆ ಗೊತ್ತಿದೆ. ಹೇಗಿದ್ದರೂ ಅತಿಥಿಗಳೊಂದಿಗೆ ಉತ್ತಮವಾಗಿ ವರ್ತಿಸಬೇಕು. ತಮ್ಮ ಉನ್ನತ ಸ್ವಭಾವಗುಣವನ್ನು ತೋರಿಸಬೇಕು ಎಂದು ತಮ್ಮ ಮೇಲೆ ಕಡ್ಡಾಯಗೊಳಿಸಬೇಕು. ಈ ಸಲ ಭಾಗಿಯಾಗುವವರ ಸಂಖ್ಯೆ ಕಡಿಮೆಯಿದೆ. ಆದರೂ ಸೇವಕರು ಯಾವುದಾದರೂ ವಿಷಯದ ಕುರಿತು ಅತಿಥಿಗಳೊಡನೆ ಹೇಳುವಾಗ ಕೆಲವು ಅತಿಥಿಗಳಿಗೆ ಅದು ಇಷ್ಟವಾಗದಿರಬಹುದು. ಯಾರಾದರೂ ಮಾತನ್ನು ಪಾಲಿಸುವುದಿಲ್ಲವಾದರೂ ಪ್ರೀತಿಯಿಂದ ಅವರಿಗೆ ಮನವರಿಕೆ ಮಾಡಿಕೊಡಬೇಕು. ಈ ನಿರ್ಬಂಧಗಳನ್ನು ಪಾಲಿಸಬೇಕು ಎಂದು ಹೆಚ್ಚಿನ ಅತಿಥಿಗಳಿಗೆ ಗೊತ್ತಿದೆ. ಆದರೆ ಸೇವಕರ ವರ್ತನೆ ಸರಿಯಿಲ್ಲದಿದ್ದರೆ ಹೆಚ್ಚಿನ ತೊಂದರೆ ಉಂಟಾಗಬಹುದು. ಅತಿಥಿಯನ್ನು ಗೌರವಿಸುವುದು ಒಬ್ಬ ಸತ್ಯವಿಶ್ವಾಸಿಯ ಲಕ್ಷಣವಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವರು. ಈ ಸತ್ಯವಿಶ್ವಾಸದ ವೈಶಿಷ್ಟ್ಯ ಪ್ರತಿಯೊಬ್ಬರಲ್ಲಿ ಇರಬೇಕು.

ಹುಝೂರ್ ಹೇಳಿದರು: ಅತಿಥಿ ಸತ್ಕಾರ ಮಾಡುವವರೊಡನೆ ಅವರ ಜವಾಬ್ದಾರಿಗಳ ಕುರಿತು ಹೇಳಿದ ಹಾಗೆಯೇ ಇಸ್ಲಾಂ ಅತಿಥಿಗಳನ್ನೂ ಅವರ ಜವಾಬ್ದಾರಿಗಳ ಕಡೆಗೆ ಗಮನ ಸೆಳೆದಿದೆ. ಅತಿಥಿ ಸತ್ಕಾರ ಮಾಡುವವರ ತೊಂದರೆಗಳ ಕುರಿತು ಕೂಡ ಗಮನವಹಿಸಬೇಕು. ಅತಿಥಿ ಸತ್ಕಾರ ಮಾಡುವವರೊಡನೆ ಅತಿಥಿಗಳೊಡನೆ ಉತ್ತಮವಾಗಿ ವರ್ತಿಸಬೇಕು ಎಂದು ಹೇಳಿದ ರೀತಿಯಲ್ಲಿ ಅತಿಥಿಗಳೊಡನೆ ಇಸ್ಲಾಂ ಹೀಗೆ ಹೇಳುತ್ತದೆ: ಮನೆಯವನು ಬರಲು ಬಿಡದಿದ್ದರೆ ಹೋಗಬಾರದು ಎಂದೂ ಮರಳಿ ಹೋಗಬೇಕೆಂದು ನಿಮ್ಮೊಡನೆ ಹೇಳಿದರೆ ಮರಳಿ ಹೋಗಬೇಕು ಎಂದೂ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಉಪದೇಶಿಸಿದ್ದಾನೆ. ಇದು ಬಹಳ ಹೆಚ್ಚಿನ ಪರಿಶುದ್ಧತೆಗೆ ಕಾರಣವಾಗುವುದು.

ಜಲ್ಸ ಸಾಲಾನದಲ್ಲಿ ಪಾಲ್ಗೊಳ್ಳುವುದರ ಒಂದು ಉದ್ದೇಶ ತಮ್ಮನ್ನು ಪರಿಶುದ್ಧಗೊಳಿಸುವುದಾಗಿದೆ. ಕೆಲವರು ಜಲ್ಸದಲ್ಲಿ ಭಾಗವಹಿಸಲು ಅನುಮತಿಗಾಗಿ ನನಗೆ ಪತ್ರ ಬರೆದಿರುವರು. ಅವರು ವ್ಯವಸ್ಥೆಯನ್ನು ಪಾಲಿಸಬೇಕು. ಅನುಮತಿ ಸಿಗದ ಕಾರಣ ಬೇಸರಗೊಳ್ಳಬಾರದು. ದೂರಲೂ ಬಾರದು. ಇಂತಹ ಸ್ಥಿತಿಯಲ್ಲಿ ದುಆ ಮಾಡಿರಿ. ಇಂತಹ ಸ್ಥಿತಿಯಲ್ಲಿ ಹೆಚ್ಚಿನ ತಳಮಳದಿಂದ ದುಆ ಮಾಡಬಹುದಾಗಿದೆ.

ಪವಿತ್ರ ಖುರ್‌ಆನ್ ಪ್ರಕಾರ ನಡೆಯುವುದಕ್ಕೆ ಸಂಬಂಧಿಸಿ ಸಹಾಬರ ಮಾದರಿ ವಿಸ್ಮಯಕರವಾದುದಾಗಿದೆ. ಮನೆಯವನು ಮನೆಗೆ ಪ್ರವೇಶಿಸಲು ಅನುಮತಿ ಕೊಡದಿದ್ದರೆ ಪ್ರವೇಶಿಸಬೇಡ ಎಂಬ ಪವಿತ್ರ ಖುರ್‌ಆನಿನ ಆಜ್ಞೆಯನ್ನು ಪಾಲಿಸುವ ಸಲುವಾಗಿ ಒಬ್ಬ ಸಹಾಬಿ ಮತ್ತೊಬ್ಬ ಸಹಾಬಿಯ ಮನೆಗೆ ಪದೇ ಪದೇ ಹೋಗುತ್ತಿರುತ್ತಾರೆ. ಆದರೆ ಆ ಮತ್ತೊಬ್ಬ ಸಹಾಬಿ ಪವಿತ್ರ ಖುರ್‌ಆನಿನ ಆಜ್ಞೆ ಪ್ರಕಾರವೇ ಆ ಸಹಾಬಿಯನ್ನು ಪ್ರತಿಸಲ ಮನೆಗೆ ಪ್ರವೇಶಿಸಲು ಅನುಮತಿ ಕೊಡುತ್ತಿರುತ್ತಾರೆ. ಇಬ್ಬರೂ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಪವಿತ್ರ ಖುರ್‌ಆನಿನ ಪ್ರಕಾರ ನಡೆಯುತ್ತಿರುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ) ಪವಿತ್ರ ಖುರ್‌ಆನಿನ ಅಧ್ಯಾಪನೆಗಳ ಪ್ರಕಾರ ನಡೆಯಲು ನಮ್ಮ ಗಮನ ಸೆಳೆದರು ಮತ್ತು ತಮ್ಮ ಮಾದರಿಯಿಂದ ಅವುಗಳ ಪ್ರಕಾರ ನಡೆದು ತೋರಿಸಿದರು. ಆದ್ದರಿಂದ ಪಾಲ್ಗೊಳ್ಳಲು ಅನುಮತಿ ಸಿಗದವರು ಪಾಲ್ಗೊಳ್ಳಲು ಪ್ರಯತ್ನಿಸಬಾರದು. ಇದರ ಬಗ್ಗೆ ಯಾವುದೇ ರೀತಿಯಲ್ಲಿ ಆಕ್ಷೇಪ ಎತ್ತಬಾರದು. ಯಾರಿಗೆ ಆಮಂತ್ರಣ ಪತ್ರ ಮತ್ತು ಅನುಮತಿ ಸಿಕ್ಕಿದೆಯೋ ಅವರು ಖಂಡಿತ ಜಲ್ಸದಲ್ಲಿ ಭಾಗವಹಿಸಬೇಕು. ಇಲ್ಲದಿದ್ದರೆ ಅನುಮತಿ ಸಿಗದವರಿಗೆ ಅನ್ಯಾಯ ಮಾಡಿದಂತೆ ಆಗುವುದು. ಹವಾಮಾನದ ಕೇಡನ್ನು ನೆಪವನ್ನಾಗಿ ಮಾಡಬೇಡಿರಿ.

ರಬ್ವ ಮತ್ತು ಖಾದಿಯಾನಿನ ಜಲ್ಸಗಳಿಗೆ ಸಂಬಂಧಿಸಿ ಹೇಳುವುದಾದರೆ ಅಲ್ಲೆಲ್ಲ ತೆರೆದ ಆಕಾಶದ ಕೆಳಗೆ ಸಹ ಜಲ್ಸಗಳು ನಡೆಯುತ್ತಿದ್ದುವು. ಇಸ್ಲಾಮಾಬಾದ್ ಯು.ಕೆ.ಯಲ್ಲೂ ಆರಂಭದ ಜಲ್ಸಗಳಲ್ಲಿ ನೀರು ಜಲ್ಸದ ಮೈದಾನದ ಒಳಗೆ ಬರುತ್ತಿತ್ತು. (ಹುಝೂರ್ ತನ್ನ ಸ್ವಂತ ಉದಾಹರಣೆಯನ್ನು ಪ್ರಸ್ತಾಪಿಸುತ್ತಾ ಹೇಳಿದರು:) ಇಸ್ಲಾಮಾಬಾದಿನ ಆರಂಭಿಕ ಜಲ್ಸಗಳಲ್ಲಿ ಸಜ್ದ ಮಾಡುವಾಗ ಹಣೆ ಮತ್ತು ಮಂಡಿಗಳಲ್ಲಿ ಕೆಸರಾಗುತ್ತಿತ್ತು. ಆದರೆ ವಿಶೇಷವಾದ ಆವೇಶದಿಂದ ಜನರು ಜಲ್ಸಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಆದ್ದರಿಂದ ಅನುಮತಿ ಪತ್ರ ಸಿಕ್ಕಿದವರು ಖಂಡಿತ ಜಲ್ಸದಲ್ಲಿ ಭಾಗವಹಿಸಬೇಕು.

(ವ್ಯವಸ್ಥೆಗೆ ಸಂಬಂಧಿಸಿ ಕೆಲವು ಸಂಗತಿಗಳ ಬಗ್ಗೆ ಸಹ ಹುಝೂರ್ ಹೇಳಿದರು:) ದೂರವನ್ನು ಪಾಲಿಸಬೇಕು, ಊಟವನ್ನು ಪಡೆಯುವಾಗ ಮಾಸ್ಕನ್ನು ಹಾಕಬೇಕು, ಡ್ಯೂಟಿ ನೀಡುವವರು ಮಾಸ್ಕ್ ಧರಿಸುವುದನ್ನು ಖಚಿತಪಡಿಸಬೇಕು. ವ್ಯವಸ್ಥೆಯಡಿಯಲ್ಲಿ ಘೋಷ ವಾಕ್ಯಗಳು ಹೇಳಲ್ಪಟ್ಟರೆ ಮಾಸ್ಕ್ ಹಾಕಿಕೊಂಡೇ ಅದಕ್ಕೆ ಜವಾಬು ಕೊಡಬೇಕು. ಮೂಗು ಮತ್ತು ಬಾಯಿ ಎರಡೂ ಕವರ್ ಮಾಡಿರಬೇಕು. ಸೆಕ್ಯೂರಿಟಿ ಬಗ್ಗೆ ಅಸಡ್ಡೆ ಸಲ್ಲದು. ಎಲ್ಲರೂ ಪರಿಪೂರ್ಣವಾಗಿ ಎಚ್ಚರಿಕೆಯಿಂದಿರಬೇಕು. ಅದಲ್ಲದೇ ದೀರ್ಘ ಕಾಲದ ನಂತರ ಪರಸ್ಪರ ಭೇಟಿಯಾಗುವವರು ಆ ಕಾರಣದಿಂದ ಪ್ರೋಗ್ರಾಮ್‌ಗಳನ್ನು ಕೇಳುವುದನ್ನು ಮತ್ತು ದುಆ ಮಾಡುವುದನ್ನು ಮರೆತು ಬಿಡಬಾರದು. ಅವುಗಳಿಂದ ಬಿಟ್ಟು ನಿಲ್ಲುವವರಾಗಬಾರದು.

(ಹಝ್ರತ್ ಮುಸ್ಲಿಹ್ ಮೌಊದ್(ರ)ರ ಒಂದು ಮಾತನ್ನು ಹುಝೂರ್ ಹೇಳಿದರು:) ಜಲ್ಸದ ದಿನಗಳಲ್ಲಿ ದೇವಸ್ಮರಣೆ ಮಾಡುವುದರ ಒಂದು ಪ್ರಯೋಜನ ಅಲ್ಲಾಹನು ಹೇಳಿದ್ದೇನೆಂದರೆ, ಅಲ್ಲಾಹನನ್ನು ಸ್ಮರಿಸುವ ದಾಸನನ್ನು ಅಲ್ಲಾಹನು ಸ್ಮರಿಸುತ್ತಾನೆ. ಯಾವನನ್ನು ಅಲ್ಲಾಹನು ಸ್ಮರಿಸುತ್ತಾನೋ ಅವನಿಗಿಂತ ಭಾಗ್ಯವಂತ ಬೇರೆ ಯಾರು ಇರಲು ಸಾಧ್ಯ?

(ಹುಝೂರ್ ಹೇಳಿದರು:) ತಮ್ಮ ದೇಶಗಳಲ್ಲಿ ಅಥವಾ ಮನೆಗಳಲ್ಲಿ ಜಲ್ಸವನ್ನು ಕೇಳುವ ಎಲ್ಲ ಅಹ್ಮದಿಯರು ಸಹ ಧ಼ಿಕ್ರೇ ಇಲಾಹಿ (ದೇವಸ್ಮರಣೆ) ಮಾಡಬೇಕು. ಜಲ್ಸದ ವಾತಾವರಣದಿಂದ ಸಂಪೂರ್ಣವಾಗಿ ಪ್ರಯೋಜನ ಪಡೆಯಬೇಕು. ಜಲ್ಸದ ಕಾರ್ಯಕ್ರಮಗಳನ್ನು ಪರಿಪೂರ್ಣ ನಿಷ್ಠೆ ಮತ್ತು ಗಮನದಿಂದ ಕೇಳಬೇಕು. ನಮ್ಮಲ್ಲಿ ಪ್ರತಿಯೊಬ್ಬರು ನಮ್ಮೊಳಗೆ ನಿಷ್ಠೆಯನ್ನು ಉಂಟುಮಾಡುವವರನ್ನಾಗಿ ಅಲ್ಲಾಹನು ಮಾಡಲಿ – ಆಮೀನ್.

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ط وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُبِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 06-08-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon